## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 510/2023

**ಸಾಕ್ಷಿಯನ್ನು ದಿಃ 04.01.2024 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಮಂಗಳಗೌರಿ | ಸಿಡಬ್ಲ್ಯೂಃ2 | ಪಿಡಬ್ಲ್ಯೂಃ2 |
| ಗಂಡನ ಹೆಸರು | ರವಿಕಿರಣ | | |
| ವಯಸ್ಸು | 44 ವರ್ಷ | | |
| ಉದ್ಯೋಗ | ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರು | | |
| ವಾಸಸ್ಥಳ | ತಟ್ಟೆಕೆರೆ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನನಗೆ ಚಾಸಾ-1 ಮತ್ತು 3 ರಿಂದ 8ರವರ ಪರಿಚಯ ಇರುತ್ತದೆ. ಮೃತ ನಾಗಯ್ಯ ಮತ್ತು ಜ್ಯೋತಿರವರು ನನಗೆ ಗೊತ್ತು, ಅವರು ನನ್ನ ಜೊತೆ ಕೆಲಸ ಮಾಡುವವರಾಗಿದ್ದರು. ನಾವೆಲ್ಲ ಅಂದರೆ ಗ್ರಂಥಾಲಯಗಳ ಮೇಲ್ವಿಚಾರಕರಾದ ಮೃತ ನಾಗಯ್ಯ, ಮೃತ ಜ್ಯೋತಿ, ನಾನು, ಚಾಸಾ-1, 3 ರಿಂದ 8ರವರು ದಿನಾಂಕ 26.06.2022 ರಂದು ಮೇಲ್ವಿಚಾರಕರ ಸಭೆಗಾಗಿ ಬೆಳಿಗ್ಗೆ ಮಂಡ್ಯಕ್ಕೆ ಹೋಗಿ ಸಂಜೆ ವಾಪಸ್ ಬರುವಾಗ 8 ರಿಂದ 8.30ರ ಸಮಯದಲ್ಲಿ ಮಲ್ಲಿನಾಥಪುರದ ಬಳಿ ನಾವು ಬರುತ್ತಿದ್ದ ಟಿ.ಟಿ. ವಾಹನದಲ್ಲಿ ಬರುತ್ತಿದ್ದೆವು. ಅದು ಸ್ವಲ್ಪ ಜೋರಾಗಿ ಬರುತ್ತಿತ್ತು. ಕ್ರಾಸ್ ನಲ್ಲಿ ತಿರುಗಿಕೊಳ್ಳುತ್ತಿರುವಾಗ ಕೆ.ಎಸ್.ಆರ್.ಟಿ.ಸಿ. ಬಸ್ ಬಂದು ಹೊಡೆಯಿತು. ಟಿಟಿ ವಾಹನದ ಎಡಭಾಗದಲ್ಲಿ ಕುಳಿತಿದ್ದ ನಾಗಯ್ಯ ರವರು ಸ್ಥಳದಲ್ಲೆ ಮೃತಪಟ್ಟರು. ಜ್ಯೋತಿರವರಿಗೆ ತೀವ್ರ ಸ್ವರೂಪದ ಗಾಯ ಹಾಗೂ ಉಳಿದವರಿಗೆಲ್ಲ ಗಾಯಗಳು ಮತ್ತು ಒಳಪೆಟ್ಟುಗಳು ಆಗಿದ್ದವು. ನನಗೂ ಕೂಡ ಮೂಗಿನ ಮೇಲೆ, ಕತ್ತಿನ ಕೆಳಭಾಗ ಮತ್ತು ಕಾಲಿಗೆ ಪೆಟ್ಟಾಗಿತ್ತು. ನನ್ನನ್ನು ಮತ್ತು ಚಾಸಾ-1 ಮತ್ತು 3ರವರನ್ನು ಹುಣಸೂರಿನ ಸರ್ಕಾರಿ ಆಸ್ಪತ್ರೆಗೆ ಕರೆ

ತಂದರು. ನಾವು ಆ ದಿನ ರಾತ್ರಿ ಪೂರ್ತಿ ಅಡ್ಮಿಟ್ ಆಗಿ, ಅಲ್ಲಿ ಚಿಕಿತ್ಸೆ ಸರಿಯಾಗಿ ಸಿಗದ ಕಾರಣ ಮಾರನೇ ದಿನ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿರುತ್ತೇನೆ.

ನಾವು ಹೋಗುತ್ತಿದ್ದ ಟಿಟಿ ವಾಹನದ ಸಂಖ್ಯೆ ಕೆಎ-02-ಎ-6216 ಆಗಿತ್ತು. ಆ ದಿನ ನಮ್ಮ ಟಿ.ಟಿ. ವಾಹನವನ್ನು ಓಡಿಸುತ್ತಿದ್ದ ಚಾಲಕನನ್ನು ನೋಡಿ ಗುರುತಿಸಿದ್ದೇನೆ. ಅವರು ಇಂದು ನ್ಯಾಯಾಲಯದಲ್ಲಿ ಇದ್ದಾರೆ. ಈ ಅಪಘಾತ ಆಗಿದ್ದು ನನ್ನ ಪ್ರಕಾರ ಟಿಟಿ ವಾಹನದ ಚಾಲಕನ ತಪ್ಪಿನಿಂದ ಈ ಅಪಘಾತ ಆಗಿರುತ್ತದೆ. ಟಿಟಿ ವಾಹನದ ಚಾಲಕ ಸರಿಯಾಗಿ ವಾಹನವನ್ನು ಚಾಲನೆ ಮಾಡುತ್ತಿರಲಿಲ್ಲ ಅತೀ ವೇಗವಾಗಿ ಚಾಲನೆ ಮಾಡುತ್ತಿದ್ದರು ಅದು ಟರ್ನ ತೆಗೆದುಕೊಳ್ಳುವಾಗ ಈ ಅಪಘಾತ ಆಗಿರುತ್ತದೆ. ಕೆ.ಎಸ್.ಆರ್.ಟಿ.ಸಿ. ಬಸ್ ಸಂಖ್ಯೆ ನನಗೆ ಗೊತ್ತಿಲ್ಲ. ಅದನ್ನು ನಾನು ನೋಡಲಿಲ್ಲ. ಈ ಬಗ್ಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ. ಚಾಸಾ-1 ರವರು ದೂರು ನೀಡಿರುವುದನ್ನು ಹೊರತು ಪಡಿಸಿ ನಾನು ಇಂದು ಈ ನ್ಯಾಯಾಲಯದಲ್ಲಿ ಹೇಳುತ್ತಿರುವುದನ್ನು ಬಿಟ್ಟು ಬೇರೆಲ್ಲೂ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀಸವಾಲು ಸಸಅ ರವರಿಂದಃ-**

ದಿನಾಂಕ 27.06.2022 ರಂದು ನಾವು ಆ ದಿನ ಸಭೆಗೆ ಹೋಗಿದ್ದೆವು ಎಂದರೆ ಸರಿಯಲ್ಲ 26.06.2022 ರಂದು ಹೋಗಿದ್ದೆವು. ನಾನು ಮತ್ತು ನಮ್ಮ ಮೇಲ್ವಿಚಾರಕರುಗಳು ಎಲ್ಲಾ ಹುಣಸೂರಿನಿಂದ ಕೆಎ-12-ಎ-6816 ರ ಟೆಂಪೋ ಟ್ರಾವಲರ್ ವಾಹನದಲ್ಲಿ ಮಂಡ್ಯಕ್ಕೆ ಹೋಗಿದ್ದೆವು ಎಂದರೆ ಸರಿ. ನಂತರ ಸಭೆಯನ್ನು ಮುಗಿಸಿಕೊಂಡು ರಾತ್ರಿ 8 ಗಂಟೆ ಸಮಯದಲ್ಲಿ ವಾಪಸ್ ಹುಣಸೂರಿಗೆ ಬರುತ್ತಿದ್ದಾಗ ಮಲ್ಲಿನಾಥಪುರದ ಗ್ರಾಮದ ಬಳಿ ನಮ್ಮ ಟಿಟಿ ಚಾಲಕ ಪ್ರದೀಪ ಎಂಬುವವನು ನಿಮ್ಮ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಅಡ್ಡಾದಿಡ್ಡಿಯಾಗಿ ಚಾಲನೆ ಮಾಡಿಕೊಂಡು

ಹೋಗಿ ಡಿವೈಡರನ ಬಲಭಾಗದಲ್ಲಿ ಎದುರುಗಡೆಯಿಂದ ಹುಣಸೂರು ಕಡೆಯಿಂದ ಬರುತ್ತಿದ್ದ ಕೆಎ-09-ಎಫ್-5132 ನಂಬರಿನ ಕೆ.ಎಸ್.ಆರ್.ಟಿ.ಸಿ. ಬಸ್‌ನ ಮುಂಭಾಗಕ್ಕೆ ಡಿಕ್ಕಿ ಮಾಡಿದ ಎಂದರೆ ಸರಿ. ಆಗ ಸಾರ್ವಜನಿಕರೆಲ್ಲ ಬಂದು ನಮ್ಮನ್ನು ಎತ್ತಿ ಸುದಾರಿಸಿದರು ಎಂದರೆ ಸರಿ. ನಮ್ಮ ಟಿಟಿ ವಾಹನದ ಮುಂಭಾಗದ ಎಡಭಾಗದ ಸೀಟ್ನಲ್ಲಿ ಕುಳಿತಿದ್ದ ಬನ್ನಿಕುಪ್ಪೆ ಗ್ರಾಮದ ನಾಗಯ್ಯರವರ ತಲೆಗೆ, ಮೈಕೈಗೆ ತೀವ್ರತರನಾದ ಪೆಟ್ಟಾಗಿ ಸ್ಥಳದಲ್ಲೆ ವಾಹನದಲ್ಲೆ ಮೃತಪಟ್ಟರು ಎಂದರೆ ಸರಿ. ಹಿಂಭಾಗದ ಸೀಟನಲ್ಲಿ ಜ್ಯೋತಿ ಕುಳಿತಿದ್ದರು, ಅವರ ಹಿಂಭಾಗದ ಸೀಟ್ ನಲ್ಲಿ ನಾವು ಕುಳಿತಿದ್ದೆವು ಎಂದರೆ ಸರಿ. ಸದರಿ ವಾಹನದಲ್ಲಿ ಕುಳಿತಿದ್ದ ನನಗೆ ಮತ್ತು ಚಾಸಾ-1, 3 ರಿಂದ 8 ರವರ ತಲೆ, ಮೈಕೈಗಳಿಗೆ ತೀವ್ರ ಸ್ವರೂಪದ ಪೆಟ್ಟಾಗಿತ್ತು ಎಂದರೆ ಸರಿ. ಸ್ವಲ್ಪ ಹೆಚ್ಚು ಪೆಟ್ಟಾಗಿದ್ದ ಜೋತಿ, ಸುನಿತಮ್ಮ, ಯಶೋಧಮ್ಮ, ಕವಿತಾ ರವರುಗಳನ್ನು 108-ಅಂಬುಲೆನ್ಸನಲ್ಲಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕಳಿಸಿದ್ದರು ಎಂದರೆ, ಸುನಿತಾರವರು ಆಸ್ಪತ್ರೆಗೆ ದಾಖಲಾಗಲಿಲ್ಲ, ಉಳಿದವರನ್ನು ಮೈಸೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಚಾಸಾ-5 ಜಯಮ್ಮರವರನ್ನು ಯಾವುದೋ ಖಾಸಗಿ ಕಾರಿನಲ್ಲಿ ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಯಾವ ಆಸ್ಪತ್ರೆಗೆ ಎಂದು ಗೊತ್ತಿಲ್ಲ, ಆದರೆ ಕರೆದುಕೊಂಡು ಹೋದರು. ನನ್ನನ್ನು, ಚಾಸಾ-1 ಮತ್ತು ಚಾಸಾ-3 ರವರನ್ನು 108-ಅಂಬುಲನ್ಸನಲ್ಲಿ ಹುಣಸೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು ಎಂದರೆ ಸರಿ. ಚಾಸಾ-8 ರವರಿಗೆ ಹೆಚ್ಚು ಏಟಾಗಿರಲಿಲ್ಲ ಕಾರಣ ಅವರು ಚಿಕಿತ್ಸೆ ಪಡೆದುಕೊಳ್ಳಲಿಲ್ಲ ಎಂದರೆ ಸರಿ. ಜ್ಯೋತಿರವರಿಗೆ ಮೈಸೂರಿನ ವೃಂದಾವನ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದಾಗ ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ 30.06.2022 ರಂದು ಬೆಳಿಗ್ಗೆ 5.46 ಗಂಟೆಗೆ ಮೃತಪಟ್ಟಿರುತ್ತಾರೆ ಎಂದರೆ ಸರಿ. ಈ ಅಪಘಾತಕ್ಕೆ ಟಿಟಿ ವಾಹನದ ಚಾಲಕನ ಅತೀ ವೇಗ ಮತ್ತು ಅಜಾಗರೂಕತೆಯೇ ಕಾರಣ ಆಗಿರುತ್ತದೆ ಎಂದರೆ ಸರಿ. ಈ ರೀತಿ ನಾನು ಪೊಲೀಸರ ಈಗ ಓದಿ ಹೇಳಿದಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿ. ಸದರಿ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಿದೆ.

**ಪಾಟೀಸವಾಲು ಃ ಆರೋಪಿ ಪರ ಶ್ರೀ ಕೆ.ಆರ್. ವಕೀಲರಿಂದ ಃ**

ನಾವು ಆ ದಿನ ಸಭೆ ಮುಗಿಸಿಕೊಂಡು ಮಂಡ್ಯದಿಂದ ಬರುವಾಗ ನಾನು ಟಿಟಿ ವಾಹನದ ಬಲಭಾಗದ ಎರಡು ಸೀಟಗಳು ಇರುವ ಕಡೆ ನಾನು ಮತ್ತು ಚಾಸಾ–3 ಶೀಲಾ ಕುಳಿತಿದ್ದೆವು. ಅಪಘಾತವಾದಾಗ ನಾನು ನಿದ್ದೆ ಮಾಡುತ್ತಿರಲಿಲ್ಲ, ಚಾಸಾ–3 ರವರ ಜೊತೆ ಮಾತನಾಡುತ್ತಿದ್ದೆ. ಟಿಟಿ ವಾಹನದ ಕಿಟಕಿಗೆ ಬಟ್ಟೆಸ್ಕ್ರೀನ್ ಇತ್ತು ಎಂದರೆ ಸರಿ. ಟಿಟಿ ವಾಹನ ತಿರುಗಿಕೊಳ್ಳುತ್ತಿದ್ದಾಗ ಕೆ.ಎಸ್.ಆರ್.ಟಿ.ಸಿ. ಬಸ್ ಬಂದು ಹೊಡೆಯಿತು. ಆದ್ದರಿಂದ ಯಾರ ತಪ್ಪಿನಿಂದ ಈ ಅಪಘಾತ ಆಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ಅಪಘಾತವಾದ ಸಮಯದಲ್ಲಿ ರಾತ್ರಿಯಾಗಿತ್ತು, ನಾನು ಮಾತನಾಡುತ್ತ ಕುಳಿತಿದ್ದೆ, ಆದ್ದರಿಂದ ನಮ್ಮ ವಾಹನದ ವೇಗವನ್ನು ಅಂದಾಜಿಸಲು ಆಗುವುದಿಲ್ಲ. ನಾನು ಅಪಘಾತದ ಬಗ್ಗೆ ಇಂದೇ ಮೊದಲ ಬಾರಿ ಹೇಳಿಕೆ ನೀಡುತ್ತಿರುವುದು ಎಂದರೆ ಸರಿ. ನಾವೆಲ್ಲ ಅಪಘಾತದ ಪರಿಹಾರ ಕೋರಿ ಅರ್ಜಿಗಳನ್ನು ಹಾಕಿಕೊಂಡಿದ್ದೇವೆ ಎಂದರೆ ಸರಿ. ಬಸ್ ವಿರುದ್ಧ ಹೂಡಿದ್ದೆವೋ ಅಥವಾ ಟಿಟಿ ವಾಹನದ ವಿರುದ್ಧ ಹೂಡಿದ್ದೆವೋ ಎಂದು ನನಗೆ ಗೊತ್ತಿಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ. ಹುಣಸೂರು.